49 ಮುನೋಮು 2008, ದಿನಾಂಕ: 23.08.2008ರಂದು ಕಛೇರಿ ಕಟ್ಟಡ ನಿರ್ಮಿಸಲು ರೂ. 1665000/–ಗಳನ್ನು ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ.

ದಿನಂಕ: 29.03.2008ರಲ್ಲಿ ಆದೇಶವಾಗಿದ್ದರಿಂದ ಸಮಯದ ಅಭಾವದಿಂದ ಅನುದಾನ ಬಳಸಿಕೊಳ್ಳಲು ಸಾಧ್ಯವಾಗಲಿಲ್ಲ.

ಶಿಂಷಾ ನದಿಗೆ ಬ್ಯಾರೇಜ್

333 (568) ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ): ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನ ಶಿಂಷಾ ನದಿಗೆ ಬ್ಯಾರೇಜ್ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಇದುವರೆವಿಗೂ ಬ್ಯಾರೇಜ್ ನಿರ್ಮಿಸದಿರಲು ಕಾರಣಗಳೇನು ಮತ್ತು ಬ್ಯಾರೇಜ್ ನಿರ್ಮಾಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಮಾಹಿತಿ ನೀಡುವುದು)?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು):

ಅ) ತುರುವೇಕೆರೆ ತಾಲ್ಲೂಕಿನ ವ್ಯಾಪ್ತಿಯಲ್ಲಿ ಶಿಂಷಾ ನದಿಗೆ ಅಡ್ಡಲಾಗಿ ಈ ಕೆಳಕಂಡ ಸ್ಥಳಗಳಲ್ಲಿ ಪಿಕಪ್‌ಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ:

1. ಕಲ್ಲೂರು ಹಾಗೂ ಬಿಳಿನಂದಿ ಗ್ರಾಮಗಳ ಮಧ್ಯೆ
2. ಮಣಿಚೆಂಡೂರು ಮತ್ತು ಚಿಕ್ಕಮದುರೆ ಗ್ರಾಮಗಳ ಮಧ್ಯೆ
3. ಮುತ್ಸಂದ್ರ ಮತ್ತು ಚಿಕ್ಕ ಮದುರೆ ಗ್ರಾಮಗಳ ಮಧ್ಯೆ
4. ಆನೆಮೆಳೆ ಪಾಳ್ಯ ಮತ್ತು ಪುರದಪಾಳ್ಯ ಗ್ರಾಮಗಳ ಮಧ್ಯೆ

ಆ) ಮೇಲಿನ ಕಾಮಗಾರಿಗಳ ನಿರ್ಮಾಣಕ್ಕೆ ಕೈಗೊಂಡಿರುವ ಮಾಹಿತಿ ಈ ಕೆಳಕಂಡಂತಿರುತ್ತದೆ:

(ರೂ. ಲಕ್ಷಗಳಲ್ಲಿ)

ಕ್ರ.ಸಂ.	ಪಿಕಪ್ ಹೆಸರು	ಅಂದಾಜು ಮೊತ್ತ	ಷರಾ
1	ಕಲ್ಲೂರು–ಬಿಳಿನಂದಿ	91.25	ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ರೂ. 66.65 ಲಕ್ಷ ಪ್ರಗತಿಯಾಗಿದೆ.

ಕ್ರ.ಸಂ.	ಪಿಕಪ್ ಹೆಸರು	ಅಂದಾಜು ಮೊತ್ತ	ಷರಾ
2	ಮಣಿಚೆಂಡೂರು–ಸೊರವನಹಳ್ಳಿ	76.85	ಪ್ರಸಕ್ತ ಸಾಲಿನಲ್ಲಿ ಈ ಕಾಮಗಾರಿಗೆ ರೂ. 20.00 ಲಕ್ಷ ಅನುದಾನ ಒದಗಿಸಿದ್ದು, ಕಾಮಗಾರಿಯ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ.
3	ಮುತ್ಸಂದ್ರ – ಚಿಕ್ಕಮದುರೆ	97.10	ಪ್ರಸಕ್ತ ಸಾಲಿನಲ್ಲಿಈ ಕಾಮಗಾರಿಗೆ ರೂ. 23.97 ಲಕ್ಷ ಅನುದಾನ ಒದಗಿಸಿದ್ದು, ಕಾಮಗಾರಿಯ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ.
4	ಆನೇಮೆಳೆ ಪಾಳ್ಯ – ಪುರದಪಾಳ್ಯ	74.00	2011–12ನೇ ಸಾಲಿನಲ್ಲಿ ಕೈಗೊಳ್ಳಲಾಗುವುದು.

ನೆರೆ ಸಂತ್ರಸ್ಥರು

334 (671) ಶ್ರೀ ಮಹದೇವಪ್ರಸಾದ್ ಹೆಚ್.ಎಸ್. (ಗುಂಡ್ಲುಪೇಟೆ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ 13 ಜಿಲ್ಲೆಗಳಲ್ಲಿ ಉಂಟಾದ ಅತಿವೃಷ್ಟಿ ಹಿನ್ನೆಲೆಯಲ್ಲಿ ಎಷ್ಟು ಗ್ರಾಮಗಳನ್ನು ಸ್ಥಳಾಂತರಿಸಲು ಗುರುತಿಸಲಾಗಿದೆ; ಈ ಪೈಕಿ ಈಗಾಗಲೇ ಎಷ್ಟು ಗ್ರಾಮಗಳನ್ನು ಸ್ಥಳಾಂತರಿಸಲಾಗಿದೆ ಹಾಗೂ ಸ್ಥಳಾಂತರಗೊಳ್ಳಲು ಎಷ್ಟು ಗ್ರಾಮಗಳು ಬಾಕಿ ಇವೆ ; (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು)

ಆ) ಈ ಗ್ರಾಮಗಳಿಗೆ ಜನವರಿ 2011ರ ಅಂತ್ಯದವರೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ; ಈವರೆಗೆ ಬಿಡುಗಡೆಗೊಂಡಿದ್ದಲ್ಲಿ ಖರ್ಚಾಗಿರುವ ಮೊತ್ತ ಎಷ್ಟು; (ಜಿಲ್ಲಾವಾರು ವಿವರ ಒದಗಿಸುವುದು)

ಇ) ಸಂತ್ರಸ್ಥರ ಒಂದು ಮನೆ ನಿರ್ಮಾಣಕ್ಕೆ ಎಷ್ಟು ಮೊತ್ತವನ್ನು ಅಂದಾಜು ಮಾಡಲಾಗಿದೆ?